**ಎಸ್ ಸಿ ನಂ.118/2019 ಪಿಡಬ್ಲ್ಯೂ4**

**ಮಧ್ಯಂತರ ಆದೇಶ ದಿನಾಂಕ 28.02.2026 ರಂತೆ ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಿದ ದಿನಾಂಕ 04.04.2026.**

**ಮುಂದುವರೆದ ಪಾಟೀ ಸವಾಲುಃ *1* ರಿಂದ *3* ನೇ ಆರೋಪಿತರ ಪರ ಶ್ರೀ ವಿ ಎಸ್ ಭಟ್ ವಕೀಲರಿಂದಃ**

*1.* ನಾನು ಸಾಕ್ಷಿ ಹೇಳುತ್ತಿರುವ ಈ ಪ್ರಕರಣದಲ್ಲಿ ಸಿಐಡಿ ಪೊಲೀಸರು ನನ್ನನ್ನು ವಿಚಾರಣೆ ಮಾಡಿಲ್ಲ. ಈ ಪ್ರಕರಣದಲ್ಲಿ ಹಾಕಿದ ಅಂತಿಮ ವರದಿ ಬಗ್ಗೆ ತಿಳಿದುಕೊಂಡಿದ್ದೇನೆ. ಅದರಲ್ಲಿ ನನ್ನ ಹೇಳಿಕೆ ಕೂಡ ಇದೆ. ಆ ಹೇಳಿಕೆಯಲ್ಲಿ *1* ನೇ ಆರೋಪಿ ಕೈಯಲ್ಲಿ ಮಚ್ಚು ಇತ್ತು, *2* ನೇ ಆರೋಪಿ ಕೈಯಲ್ಲಿ ಚಾಕು ಇತ್ತು ಎಂದು ನಾನು ಹೇಳಿಲ್ಲ ಎಂದರೆ ಸರಿಯಲ್ಲ. ಚಾಸಾ.*1* ನೀಡಿದ ದೂರಿಗೆ ಪೂರಕವಾಗಿ ನಾನು ಸಾಕ್ಷಿ ನುಡಿದಿದ್ದೇನೆಂದರೆ ಸಾಕ್ಷಿ ನಡೆದ ಘಟನೆಯ ಬಗ್ಗೆ ನುಡಿದಿದ್ದೇನೆಂದು ನುಡಿಯುತ್ತಾರೆ. ಎಸ್ ಸಿ ನಂ.*82/2017* ರಲ್ಲಿ ನಾನು *6* ನೇ ಆರೋಪಿ ಎಂದರೆ ಸರಿ. ಆ ಪ್ರಕರಣದಲ್ಲಿ ಪೊಲೀಸರು ನನ್ನನ್ನು ವಶಕ್ಕೆ ಪಡೆದಾಗ ನಾನು ಹೇಳಿಕೆ ನೀಡುವಾಗ ಈ ಆರೋಪಿಗಳು ಮಾರಕಾಯುಧಗಳಿಂದ ಹಲ್ಲೆ ಮಾಡಿದ್ದಾರೆಂದು ಹೇಳಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು ನಮ್ಮ ಸಂಗಡಿಗರು ಈ ಪ್ರಕರಣದ ಆರೋಪಿಗಳು ಅರಳೀಕಟ್ಟೆಯ ಬಳಿ ಕುಳಿತಿದ್ದಾಗ, ಅಲ್ಲಿಗೆ ಹೋಗಿ ಅವರ ಮೇಲೆ ನಾವೇ ಮಾರಣಾಂತಿಕ ಹಲ್ಲೆ ಮಾಡಿದ್ದೇವೆಂದರೆ ಸರಿಯಲ್ಲ. ನಾವೇ ಅಲ್ಲಿಗೆ ಹೋಗಿ ಹರಿತವಾದ ಆಯುಧಗಳಿಂದ ಆರೋಪಿಗಳ ಮೇಲೆ ಹಲ್ಲೆ ಮೇಲೆ ಇಬ್ಬರ ಸಾವಿಗೆ ಮತ್ತು ಇಬ್ಬರ ಮಾರಣಾಂತಿಕ ಹಲ್ಲೆಗೆ ಕಾರಣರಾಗಿದ್ದೇವೆಂದರೆ ಸರಿಯಲ್ಲ. ನಮ್ಮ ಮೇಲೆ ಇರುವ ಪ್ರಕರಣದಿಂದ ತಪ್ಪಿಸಿಕೊಳ್ಳಲು ಚಾಸಾ.*1* ನೀಡಿದ ಸುಳ್ಳು ದೂರಿಗೆ ಪೂರಕವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

(ಮರು ವಿಚಾರಣೆಃಇಲ್ಲ)

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ.)

ಓ.ಹೇ.ಕೇ.ಸ.ಒ.

(ಯಾದವ ಕೆ.)

4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಮಂಡ್ಯ.